# ಬ್ರಿಡ್ಜ್ ಸಿನಿಮಾಗಳಲ್ಲಿ ಮಿಂಚುವಾಸೆ

**ರಂಗಭೂಮಿ ಹಿನ್ನೆಲೆಯಿಂದ ಬಂದಿರುವ ಮೇದಿನಿ ಕೆಳಮನೆಗೆ ಕನ್ನಡ ಚಿತ್ರರಂಗದ ಮುಖ್ಯವಾಹಿನಿಯಲ್ಲಿ ಗಟ್ಟಿ ಪಾತ್ರಗಳ ಮೂಲಕ ಮಿಂಚುವ ಆಸೆಯಿದೆ.**

■ ಪದ್ಮನಾಭ ಭಟ್



ಕಲಾಗಂಧವು ಉಸಿರಾಡುವ ಗಾಳಿಯಲ್ಲೇ ಹರಡಿಕೊಂಡಿರುವ ಹೆಗ್ಗೋಡಿನಿಂದ ಬಂದವರು ಮೇದಿನಿ ಕೆಳಮನೆ. ಅವರ ತಂದೆಯೂ ಎನ್‌ಎಸ್‌ಡಿ ಪದವೀಧರರು. ‘ಕಿನ್ನರ ಮೇಳ’ ಎಂಬ ನಾಟಕ ತಂಡ ಕಟ್ಟಿದವರು. ಹಾಗಾಗಿ ಮೇದಿನಿ ಕೂಡ ನಾಟಕಗಳ ಸಹವಾಸದಲ್ಲಿಯೇ ಬೆಳೆದರು. ಹತ್ತನೇ ತರಗತಿಯಲ್ಲಿದ್ದಾಗಲೇ ಪ್ರೇಮಾ ಕಾರಂತ ನಿರ್ದೇಶನದ ‘ಅಬ್ದುಲ್ಲಾ ಗೋಪಾಲ’ ಟೆಲಿಫಿಲಂನಲ್ಲಿಯೂ ಅಭಿನಯಿಸಿದರು. ಮರಾಠಿಯ ಖ್ಯಾತ ನಿರ್ದೇಶಕಿ ಸುಮಿತ್ರಾ ಭಾವೆ, ಯು.ಆರ್. ಅನಂತಮೂರ್ತಿ ಅವರ ಕಥೆ ‘ಸೂರ್ಯನ ಕುದುರೆ’ಯನ್ನು ಆಧರಿಸಿ ನಿರ್ದೇಶಿಸಿದ ಕಿರುಚಿತ್ರದಲ್ಲಿಯೂ ನಟಿಸಿದರು.

ಹೀಗೆ ಖ್ಯಾತನಾಮರ ಮಾರ್ಗದರ್ಶನದಲ್ಲಿಯೇ ಕ್ಯಾಮೆರಾ ಪರಿಚಯವಾಗಿದ್ದರೂ ಮೇದಿನಿ ನಟನೆಯನ್ನೇ ತನ್ನ ವೃತ್ತಿಯನ್ನಾಗಿಸಿಕೊಳ್ಳಬೇಕು ಎಂದೇನೂ ಅನಿಸಿರಲಿಲ್ಲ. ಮನಃಶಾಸ್ತ್ರದಲ್ಲಿ ಅವರಿಗೆ ವಿಪರೀತ ಆಸಕ್ತಿಯಿತ್ತು. ಅವರು ಓದಿದ್ದೂ ಕ್ಲಿನಿಕಲ್ ಸೈಕಾಲಜಿಯನ್ನೇ. ಹಾಗೆಂದು ನಟನೆಯ ಸಹವಾಸವೇನೂ ಕಮ್ಮಿಯಾಗಿರಲಿಲ್ಲ. ಕಾಲೇಜು ದಿನಗಳಲ್ಲಿಯೂ ಕ್ಲಾಸು ರೂಮಿಗಿಂತ, ರಂಗಚಟುವಟಿಕೆಗಳಲ್ಲಿ ಇರುತ್ತಿದ್ದದ್ದೇ ಹೆಚ್ಚು.

ಕ್ಲಿನಿಕಲ್ ಸೈಕಾಲಜಿ ಪದವಿಯ ಡಸರ್ಟೇಷನ್‌ಗೆ ‘ಸೈಕೊ ಡ್ರಾಮಾ’ ಎಂಬ ವಿಷಯವನ್ನು ಆರಿಸಿಕೊಂಡಿದ್ದರು. ಮಾನಸಿಕ ಕಾಯಿಲೆಯಲ್ಲಿ ರಂಗ ಚಟುವಟಿಕೆಗಳನ್ನು ಥೆರಪಿಯಾಗಿ ಬಳಸಿಕೊಳ್ಳುವ ಪದ್ಧತಿಯ ಕುರಿತಾದ ಪ್ರಬಂಧವದು. ಅದನ್ನು ಬರೆಯುತ್ತಲೇ ಮೇದಿನಿಗೆ ತಾನು ನಟಿಯಾದರೆ ಈ ಎಲ್ಲ ಸಾಧ್ಯತೆಗಳನ್ನು ಬಳಸಿಕೊಳ್ಳಬಹುದು ಅನಿಸಿತು. ಹಾಗಾಗಿ ಎನ್‌ಎಸ್‌ಡಿಗೆ ಹೋಗಿ ಸೇರಿಕೊಂಡರು.

ಎನ್‌ಎಸ್‌ಡಿ ಪದವಿ ಮುಗಿದರೂ ಮೇದಿನಿ ದೆಹಲಿಯಲ್ಲಿಯೇ ಇದ್ದುಕೊಂಡು ನಟಿಯಾಗಿಯೂ, ನಟನಾಶಿಕ್ಷಕಿಯಾಗಿಯೂ ಕೆಲಸ ಮಾಡುತ್ತಿದ್ದರು. ಈ ಸಮಯದಲ್ಲಿ ಮಾಡಿದ ಹಲವು ರಂಗಪ್ರಯೋಗಗಳು ಅವರೊಳಗಿನ ಕಲಾವಿದೆಯನ್ನು ಇನ್ನಷ್ಟು ಹುರಿಗೊಳಿಸಿದವು. ‘ವೆಬ್’ ಮತ್ತು ‘ಸೈಲೆಂಟ್ ಬ್ರೀದ್’ ಎಂಬ ಎರಡು ಕಿರುಚಿತ್ರಗಳಲ್ಲಿ ನಟಿಸಿದರು. ಅಲ್ಲಿಂದ ಮುಂಬೈಗೆ ಹೋಗಿ ಅಲ್ಲಿಯೂ ಎರಡು ವರ್ಷ ಕಿರುಚಿತ್ರ ಮತ್ತು ಜಾಹೀರಾತುಗಳಲ್ಲಿ ನಟಿಸಿದರು.

2017ರಲ್ಲಿ ಬೆಂಗಳೂರಿಗೆ ಮರಳಿದಾಗ ಅವರಿಗೆ ಸಿಕ್ಕ ಮೊದಲ ಅವಕಾಶ ‘ನಾನು ಲೇಡೀಸ್’ ಎಂಬ ಸಿನಿಮಾದಲ್ಲಿ ನಟಿಸಿದರು. ಶೈಲಜಾ ಪಡಿಂಡಳ ನಿರ್ದೇಶಿಸಿ ನಟಿಸಿರುವ ಈ ಚಿತ್ರ ಲೆಸ್ಬಿಯನ್ ಕಥಾವಸ್ತುವನ್ನು ಹೊಂದಿದೆ.

‘ಇದು ಪ್ರಾಸೆಸ್ ಓರಿಯಂಟೆಡ್ ಸಿನಿಮಾ. ಈ ಚಿತ್ರಕ್ಕಾಗಿ ನಾವು ಸುಮಾರು ಆರು ತಿಂಗಳಿನಿಂದ ತಯಾರಿ ಮಾಡಿದ್ದೆವು. ಚಿತ್ರೀಕರಣವೂ ಪರಸ್ಪರ ಪಾತ್ರಗಳನ್ನು ಶೋಧಿಸಿಕೊಂಡು, ಅತ್ಯಂತ ಸಹಜವಾಗಿ ವರ್ತಿಸುವ ರೀತಿಯಲ್ಲಿಯೇ ನಡೆಯಿತು. ನಮಗೆ ಸ್ಕ್ರಿಪ್ಟ್ ಗೊತ್ತಿರುತ್ತಿತ್ತು, ಸ್ಟ್ರಕ್ಚರ್ ಗೊತ್ತಿರುತ್ತಿತ್ತು. ಅದನ್ನು ಬಿಟ್ಟರೆ ನಮ್ಮಷ್ಟಕ್ಕೆ ನಾವು ಬಿಹೇವ್ ಮಾಡುತ್ತಿರುತ್ತಿದ್ದೆವು. ಅದನ್ನು ಶೂಟ್ ಮಾಡಲಾಗುತ್ತಿತ್ತು. ನನಗೆ ಈ ರೀತಿಯ ಪ್ರಾಸೆಸ್ ಓರಿಯಂಟೆಡ್ ಸಿನಿಮಾಗಳೇ ತುಂಬ ಇಷ್ಟ. ಯಾಕೆಂದರೆ ಅದರಿಂದ ನನ್ನೊಳಗೆ ಏನೋ ಬದಲಾವಣೆ ಆಗಲು ಸಾಧ್ಯವಿದೆ. ಆ ಪಾತ್ರದ ಜೊತೆ ನಾನು ಭಾವನಾತ್ಮಕವಾಗಿ ತೊಡಗಿಕೊಳ್ಳಲು ಸಾಧ್ಯವಿದೆ. ಇದಕ್ಕೆ